ಓಂ ಶಾಂತಿ, ಬಾಪ್‌ದಾದಾ, ರಿವೈಸ್ ಕೋರ್ಸ್/ಅವ್ಯಕ್ತ ಮುರಳಿ 31-03-1995.

# *ಪರಮಾತ್ಮ ಮಿಲನದ ಮೇಳದ ಉಡುಗೊರೆ ಕಿರೀಟ, ಸಿಂಹಾಸನ ಮತ್ತು ತಿಲಕ.*

(परमात्म मिलन मेले की सौगात - ताज, तख्त और तिलक)

ಇಂದು ಬೇಹದ್ದಿನ ತಂದೆ ತನ್ನ ಎಲ್ಲಾ ಮಕ್ಕಳನ್ನು ಬೇಹದ್ದಿನಲ್ಲಿ ನೋಡುತ್ತಿದ್ದಾರೆ. ಬೇಹದ್ದಿನ ತಂದೆಯಾಗಿದ್ದಾರೆ ಮತ್ತು ತಾವೆಲ್ಲರೂ ಸಹ ಬೆಹದ್ದಿನ ಮಾಲೀಕರು ಬಾಲಕರಾಗಿದ್ದೀರಾ. ಬಾಪ್‌ದಾದಾರವರು ಎಲ್ಲಾ ಸ್ನೇಹಿ ಸಹಯೋಗಿ ಮಕ್ಕಳನ್ನು ನೋಡಿ ಹರ್ಷಿತರಾಗುತ್ತಿದ್ದಾರೆ ಹಾಗು ಮಕ್ಕಳು ಸಹ ತಂದೆಯನ್ನು ನೋಡಿ ಹರ್ಷಿತರಾಗುತ್ತಿದ್ದಾರೆ ತಂದೆಗೆ ಜಾಸ್ತಿ ಖುಷಿಯಿದೆಯೇ? ಅಥವಾ ಮಕ್ಕಳಿಗೆ ಜಾಸ್ತಿ ಖುಷಿಯಿದೆಯೇ? ಏನು ಹೇಳುವಿರಿ? ಇಬ್ಬರದ್ದು. ಇದಕ್ಕೆ ಪರಮಾತ್ಮನ ಮಿಲನದ ಮೇಳ ಎಂದು ಹೇಳಲಾಗುತ್ತದೆ. ಮೇಳಗಳಂತೂ ಬಹಳಷ್ಟು ಇದ್ದೆ ಇರುತ್ತವೆ ಆದರೆ ಪರಮಾತ್ಮನ ಮಿಲನದ ಮೇಳ ಈ ಸಂಗಮಯುಗದಲ್ಲಿಯೇ ಇರುತ್ತದೆ. ಇಡೀ ಕಲ್ಪದಲ್ಲಿ ಇರುವುದಕ್ಕೆ ಸಾಧ್ಯವಿಲ್ಲ. ಈಗ ಆಗುತ್ತಿದೆ ಮತ್ತು ಆಗುತ್ತದೆ. ತಮ್ಮೆಲ್ಲರಿಗೆ ಈ ಮೇಳ ಇಷ್ಟವಾಗುತ್ತದೆಯಲ್ಲವೇ? ಬಾಪ್‌ದಾದಾರವರು ಮಕ್ಕಳ ಭಾಗ್ಯವನ್ನು ನೋಡಿ ಹರ್ಷಿತರಾಗುತ್ತಾರೆ ಮತ್ತು ಹೃದಯದ ಗೀತೆಯನ್ನು ಹಾಡುತ್ತಿರುತ್ತಾರೆ ವಾಹ್ ನನ್ನ ಮಕ್ಕಳೇ ವಾಹ್! ಯಾವ ಭಾಗ್ಯವು ಸ್ವಪ್ನದಲ್ಲೂ ಇರಲಿಲ್ಲ, ಸಂಕಲ್ಪದಲ್ಲೂ ಇರಲಿಲ್ಲ ಆದರೆ ಈಗ ಸಾಕಾರದಲ್ಲಿ ಶ್ರೇಷ್ಠ ಭಾಗ್ಯದ ಅನುಭವ ಮಾಡುತ್ತಿದ್ದೀರಿ. ಪ್ರತಿಯೊಬ್ಬರ ಮಸ್ತಕದ ಮೇಲೆ ಶ್ರೇಷ್ಠ ಭಾಗ್ಯದ ರೇಖೆ ಹೊಳೆಯುತ್ತಿದೆ ಎಲ್ಲರೂ ಹೊಳೆಯುತ್ತಿರುವಂತಹ ನಕ್ಷತ್ರಗಳಾಗಿದ್ದೀರಲ್ಲವೇ? ತಮ್ಮ ಶ್ರೇಷ್ಠ ಭಾಗ್ಯದ ಸ್ಮೃತಿಯಲ್ಲಿ ಇರುತ್ತಿರಲ್ಲವೇ ಏಕೆ ಶ್ರೇಷ್ಠ ಭಾಗ್ಯವಿದೆ? ಏಕೆಂದರೆ ಭಾಗ್ಯವಿಧಾತನ ಮುಖಾಂತರ ತಾವು ಭಾಗ್ಯವಂತ ಅತ್ಮರಿಗೆ ದಿವ್ಯ ಬ್ರಾಹ್ಮಣ ಜನ್ಮ ಸಿಕ್ಕಿದೆ. ತಂದೆಯನ್ನು ಭಾಗ್ಯವಿಧಾತನೆಂದು ಹೇಳುತ್ತಾರೆ. ಹಾಗೂ ಬ್ರಹ್ಮಾ ತಂದೆಯನ್ನೂ ಭಾಗ್ಯವಿಧಾತನೆಂದು ಹೇಳುತ್ತಾರೆ. ಹಾಗು ತಮ್ಮೆಲ್ಲರ ಜನ್ಮ ಬಾಪ್‌ದಾದಾರವರ ಮುಖಾಂತರ ಆಗಿದೆ ಯಾರ ತಂದೆ ಸ್ವಯಂ ಭಾಗ್ಯವಿಧಾತರಾಗಿದ್ದಾರೆಯೋ ಅವರ ಭಾಗ್ಯ ಎಷ್ಟು ಶ್ರೇಷ್ಠವಾಗಿರಬಹುದು, ಪರಮಾತ್ಮ ಮಿಲನವನ್ನು ಆಚರಿಸುತ್ತಿದ್ದೀರಲ್ಲವೇ! (ಡಬಲ್ ವಿದೇಶಿಯವರ ಜೊತೆ) ಇವರು ಸಹ ಆಚರಿಸುತ್ತಿದ್ದಾರೆ! ಬೇಹದ್ದಿನ ಮೇಳದಲ್ಲಿ ಒಂದುವೇಳೆ ಡಬಲ್ ವಿದೇಶಿಗಳು ಇಲ್ಲದಿದ್ದರೆ ಬೇಹದ್ದಿನದೆಂದು ಹೇಳಲಾಗುವುದಿಲ್ಲ. ತಮ್ಮೆಲ್ಲರದು ವಿಶೇಷ ಪಾತ್ರವಿದೆ. ಇದನ್ನು ತಂದೆ ಮತ್ತು ಸರ್ವ ಮಕ್ಕಳು ನೋಡಿ ನೋಡಿ ಹರ್ಷಿತರಾಗುತ್ತಾರೆ. ಭಾಗ್ಯವಿಧಾತನ ಮುಖಾಂತರ ಜನ್ಮವಾಗುವುದು ಇದು ಎಲ್ಲದಕ್ಕಿಂತ ನಂಬರ್‌ವನ್ ಭಾಗ್ಯವಾಗಿದೆ. ಜೊತೆ-ಜೊತೆ ಇಡೀ ಕಲ್ಪದಲ್ಲಿ ಯಾವುದೇ ಜನ್ಮದಲ್ಲಿ ಒಬ್ಬ ಪರಮಾತ್ಮ ತಂದೆಯು ಸಹ ಆಗುತ್ತಾರೆ, ಶಿಕ್ಷಕರೂ ಆಗುತ್ತಾರೆ, ಸದ್ಗುರುವು ಸಹ ಆಗುತ್ತಾರೆ. ಸರ್ವ ಸಂಬಂಧಗಳನ್ನು ನಿಭಾಯಿಸುವುದು ಇದು ಸತ್ಯಯುಗದಿಂದ ಹಿಡಿದು ಕಲಿಯುಗದವರೆಗೆ ಯಾರಿಗಾದರೂ ಇಂತಹ ಭಾಗ್ಯ ಸಿಕ್ಕಿದೆಯೇ?

ಹಾಗೂ ಈಗ ತಮಗೆ ಸಿಕ್ಕಿದೆ! ಈಗ ತಾವು ನಿಶ್ಚಯ ಹಾಗು ನಶೆಯಿಂದ ಹೇಳುತ್ತೀರಾ - ನಮ್ಮ ಪಾಲನಕರ್ತ ಪರಮಾತ್ಮನಾಗಿದ್ದಾರೆ. ಪ್ರಪಂಚದವರು ಮೇಲೆ ಮಾತ್ರಕ್ಕೆ ಪರಮಾತ್ಮ ನಮ್ಮ ಪಾಲನೆ ಮಾಡುತ್ತಿದ್ದಾರೆ ಎಂದು ಹೇಳುತ್ತಾರೆ. ಆದರೆ ತಾವು ಪ್ರತ್ಯಕ್ಷ ಅನುಭವದಿಂದ ಹೇಳುತ್ತಿದ್ದೀರಿ ಪರಮಾತ್ಮ ನಮ್ಮ ತಂದೆಯಾಗಿದ್ದಾರೆ ಹಾಗೂ ತಂದೆಯೇ ಪಾಲನಾಕರ್ತರು, ಪಾಲನೆಯನ್ನು ಮಾಡುತ್ತಿದ್ದಾರೆ! ನಶೆಯಿದೆಯಲ್ಲವೇ! ಅಥವಾ ಸ್ವಲ್ಪ-ಸ್ವಲ್ಪ ಮರೆತು ಹೋಗುತ್ತೀರಾ? ನಡೆಯುತ್ತಾ-ನಡೆಯುತ್ತಾ ತಮ್ಮ ಶ್ರೇಷ್ಠ ಭಾಗ್ಯವನ್ನು ಸಾಧಾರಣವೆಂದು ತಿಳಿದು ಬಿಡುತ್ತಿರಾ? ಇರುವುದೇ ಶ್ರೇಷ್ಠ ಆದರೆ ಸಾಧಾರಣವೆಂದುಕೊಳ್ಳುತ್ತೀರಾ. ಇದಕ್ಕಾಗಿ ಯಾವ ನಶೆ ಮತ್ತು ಖುಷಿಯ ಹೊಳಪು ಸದಾ ಇರಬೇಕೋ ಅದು ಇರುವುದಿಲ್ಲ. ಹೇಗೆ ಒಂದು ಕ್ಷಣವೂ ಸಹ ಮರೆಯುವುದಕ್ಕೆ ಸಾಧ್ಯವಿಲ್ಲ ಆದರೆ ಸಾಧಾರಾಣವೆಂದು ತಿಳಿಯುವ ಕಾರಣ ತಂದೆಯು ಸಿಕ್ಕಿಬಿಟ್ಟರು, ನಮ್ಮವರಾಗಿಬಿಟ್ಟರು, ನಾವು ಸಹ ತಂದೆಯವರಾಗಿಬಿಟ್ಟೆವು. ಯಾವಾಗ ನಮ್ಮವರಾದರೆಂದರೆ ನಶೆಯಿರಬೇಕಲ್ಲವೇ? ಆದರೆ ಕೆಲವೊಮ್ಮೆ ಶ್ರೇಷ್ಠ, ಕೆಲವೊಮ್ಮೆ ಮಧ್ಯಮ, ಕೆಲವೊಮ್ಮೆ ಸಾಧಾರಣವಾಗಿಬಿಡುತ್ತದೆ. ಯೋಚಿಸಿ. ನಮ್ಮ ತಂದೆ ಪರಮಾತ್ಮನಾಗಿದ್ದಾರೆ! ಹಾಗೂ ಶಿಕ್ಷಕರಾಗಿದ್ದಾರೆ! ಯಾವ ಶಿಕ್ಷಣವನ್ನು ಕೊಟ್ಟರು? ತಮ್ಮನ್ನು ಏನು ಮಾಡಿಬಿಟ್ಟರು? ತ್ರಿನೇತ್ರಿ, ತ್ರಿಕಾಲದರ್ಶಿ, ತ್ರಿಲೋಕಿನಾಥ ಇಂತಹ ವಿದ್ಯೆಯನ್ನು ಯಾರದರೂ ಓದುತ್ತಾರೆಯೇ! ಇದುವರೆಗೂ ಇಂತಹ ಡೀಗ್ರಿಯು ಇದೆಯಂದು ಕೇಳಿದ್ದೀರಾ? ಜಡ್ಡ, ಬ್ಯಾರಿಸ್ಟರ್, ಡಾಕ್ಟರ್, ಇಂಜಿನಿಯರ್ ಇಂತಹ ಎಲ್ಲಾ ಡೀಗ್ರಿಗಳನ್ನು ನೋಡಿದ್ದೀವೆ ಆದರೆ ತ್ರಿಲೋಕಿನಾಥ, ತ್ರಿಕಾಲದರ್ಶಿ, ತ್ರಿನೇತ್ರಿ, ಜ್ಞಾನಪೂರ್ಣ.. ಇಂತಹ ಡೀಗ್ರಿಯನ್ನು ಎಲ್ಲಾದರು ನೋಡಿದ್ದೀರಾ? ದ್ವಾಪರದಿಂದ ಕಲಿಯುಗದವರೆಗೂ ಯಾರಿಗಾದರೂ ಸಿಕ್ಕಿದೆಯೇ? ಇಂತಹ ಶಿಕ್ಷಕ ನಮ್ಮವರಾಗಿದ್ದಾರೆ. ವಿಜ್ಞಾನದವರು ವಿಜ್ಞಾನದ ಎಷ್ಟೇ ಯೋಜನೆಗಳನ್ನು ಮಾಡಿದರು ಸಹ ತ್ರಿಲೋಕದವರೆಗೆ ತಲುಪಲು ಸಾಧ್ಯವಿಲ್ಲ ಮೂರು ಲೋಕದ ಜ್ಞಾನವನ್ನು ಪ್ರಾಪ್ತಿ ಮಾಡಿಕೊಳ್ಳಲು ಸಾಧ್ಯವಿಲ್ಲ. ಹಾಗೂ ತಮ್ಮದೆ ಐದು ವರ್ಷದ ಮಗುವು ಸಹ ಮೂರು ಲೋಕದ ಜ್ಞಾನವನ್ನು ಕೊಡುತ್ತಾರೆ! ಅದು ನಶೆಯಿಂದ ಹೇಳುತ್ತಾರೆ ಸೂಕ್ಷ್ಮವತನವಿದೆ. ಮೂಲ ವತನವಿದೆಯೆಂದು ಪರಮಾತ್ಮ ಶಿಕ್ಷಕರೂ ಸಹ ಆಗಿದ್ದಾರೆ. ಶ್ರೇಷ್ಠ ಶಿಕ್ಷಣದಿಂದ - . ಈ ಡೀಗ್ರಿಯನ್ನು ಪ್ರಾಪ್ತಿ ಮಾಡಿಸಿದರು. ಆದರೆ ಪ್ರಪಂಚದಲ್ಲಿ ಎಲ್ಲದಕ್ಕಿಂತ ದೊಡ್ಡದಕ್ಕಿಂತ ದೊಡ್ಡ ಪದವಿ ರಾಜ್ಯ ಪದವಿಯಾಗಿರುತ್ತದೆ. ಅಂದಾಗ ವಿದ್ಯೆಯಿಂದ ಪದವಿಯು ಸಹ ಸಿಗುತ್ತದೆಯಲ್ಲವೇ ನಿಮ್ಮನ್ನು ರಾಜರನ್ನಾಗಿ ಮಾಡಿದರಲ್ಲವೇ? ಈಗ ರಾಜರಾಗಿದ್ದೀರಾ ಅಥವಾ ಆಗಬೇಕಾ? ರಾಜರಂತು ಆಗಿದ್ದೀರಾ ಆದರೆ ಕೆಳಗಡೆ(ನೆಲದಲ್ಲಿ). ಇದ್ದೀರಿ! ಪಕ್ಕಾ ಮನೆಯು ಸಹ ಇಲ್ಲ ಟೆಂಟ್‌ನಲ್ಲಿ ಕುಳಿತ್ತಿದ್ದೀರಿ! ಹಾಗಾದರೆ ನೋಡಿ ಶ್ರೇಷ್ಠಾತಿ ಶ್ರೇಷ್ಠ ಪದವಿ ರಾಜ್ಯ ಪದವಿಯಾಗಿದೆ. ಈಗಲೂ ಸ್ವರಾಜ್ಯ ಅಧಿಕಾರಿಗಳಾಗಿದ್ದೀರಿ ಹಾಗು ಭವಿಷ್ಯದಲ್ಲೂ ಸಹ ವಿಶ್ವರಾಜ್ಯಾಧಿಕಾರಿಗಳು ಆಗಲೇಬೇಕಾಗಿದೆ. ಇದು ಪಕ್ಕಾ ಇದೆಯಲ್ಲವೇ?' ಯಾರು ರಾಜ್ಯವನ್ನು ಮಾಡಬೇಕಾಗಿದೆ? ತಾವು ರಾಜ್ಯ ಮಾಡುತ್ತೀರಾ ಅಥವಾ ತಮ್ಮ ಮೇಲೆ ಯಾರಾದರೂ ಯಾವುದೇ ರಾಜಾ ರಾಜ್ಯ ಮಾಡುತ್ತಾರಾ? ಇಲ್ಲ. ಎಲ್ಲರೂ ಇಷ್ಟೊಂದು ರಾಜರಾಗಿಬಿಡುತ್ತೀರಾ ಎಲ್ಲರೂ ರಾಜ್ಯವನ್ನು ಮಾಡುತ್ತೀರಾ! ಪ್ರಜೆಗಳನ್ನು ತಯಾರಿ ಮಾಡಿದ್ದೀರಾ ಅಥವಾ ತಮ್ಮ ಮೇಲೆ ತಾವೇ ರಾಜ್ಯ ಮಾಡುತ್ತೀರಾ? ತಮ್ಮ ಭಾಗ್ಯವನ್ನು ನೋಡಿಕೊಳ್ಳಿ ಪರಮಾತ್ಮ ನನ್ನ ಶಿಕ್ಷಕರಾಗಿದ್ದಾರೆ. ರಾಜ್ಯ ಪದವಿಯನ್ನು ಕೊಡುವಂತಹವರು ಹಾಗು ನಂತರ ಸದ್ಗುರುವಾಗಿ ಗುರುಗಳು ಏನು ಮಾಡುತ್ತಾರೆ. ಮಂತ್ರವನ್ನು ಕೊಡುತ್ತಾರಲ್ಲವೇ ಸದ್ಗುರು ಯಾವ ಮಂತ್ರವನ್ನು

ಕೊಟ್ಟರು? ಮನ್ಮನಾಭವ, ಸದ್ಗುರುವಿನ ಮುಖಾಂತರ ಮಹಾಮಂತ್ರವು ಸಹ ಸಿಕ್ಕಿದೆ ಹಾಗು ಸರ್ವ ವರದಾನಗಳು ಸಿಕ್ಕಿವೆ. ಎಷ್ಟು ವರದಾನಗಳು ಸಿಗುತ್ತವೆ? ವರದಾನಗಳ ಲಿಸ್ಟ್‌ನ್ನು ನೋಡಿ ಎಷ್ಟು ದೊಡ್ಡದಾಗಿದೆ. ಪ್ರತಿದಿನ ವರದಾನವು ಸಿಗುತ್ತವೆಯಲ್ಲವೆ. ಎಷ್ಟು ಸಮಯದಿಂದ ಸಿಗುತ್ತಿವೆ! ಇಷ್ಟೊಂದು ವರದಾನಗಳನ್ನು ಯಾವುದೇ ಅನುಯಾಯಿಗಳಿಗೆ ಯಾವುದೇ ಗರುವು ಕೊಡುವುದಕ್ಕೆ ಸಾಧ್ಯವಿಲ್ಲ. ಇಂತಹ ಸದ್ಗುರು, ಪ್ರತಿ ನಿತ್ಯ ವರದಾನವನ್ನು ಕೊಡುವಂತಹವರನ್ನು ನೋಡಿದ್ದೀರಾ? ಈಗ ನಶೆಯಿದೆಯಲ್ಲವೇ! (ಹಾಂ ಜೀ) ಬಹಳ ಒಳ್ಳೆಯದು ಸದಾ ಇಟ್ಟುಕೊಳ್ಳಿ. ಈ ರೀತಿಯಲ್ಲ, ಇಲ್ಲಿಂದ ಬಸ್ಸಿನಲ್ಲಿ ಹೋದ ನಂತರ ನಶೆ ಇಳಿಯುವುದಕ್ಕೆ ಶುರುವಾಗಬಾರದು, ಸದಾ ಹೆಚ್ಚುತ್ತಿರಲಿ.

ಬಾಪ್‌ದಾದಾ ಎಲ್ಲಾ ಮಕ್ಕಳನ್ನು ಸದಾ ಪ್ರತಿ ಸಬ್ಜೆಕ್ಟ್‌ನಲ್ಲಿ ನಂಬರ್‌ವನ್‌ಆಗಿ ನೋಡಲು ಬಯಸುತ್ತಾರೆ. ನಂಬರ್‌ವನ್ ಆಗಿದ್ದೀರಾ ಅಥವಾ ಈಗ ಆಗಬೇಕಾ? ನಶೆಯಿಂದ ಹೇಳಿರಿ ನಾವಿಲ್ಲವೆಂದರೆ ಮತ್ಯಾರು ಆಗುವವರು! ವಿದೇಶಿಯರಿಗೆ ಡಬಲ್ ನಶೆಯಿದೆಯಲ್ಲವೇ! ಒಳ್ಳೆಯದು. ನನ್ನ ಒಂದೊಂದು ಮಗುವು ರಾಜಾ ಮಗುವಾಗಿದೆ. ಪ್ರಜೆಯಲ್ಲ ಎಂದು ತಂದೆಯು ಖುಷಿಯಾಗುತ್ತಾರೆ. ಪ್ರಜೆಗಳಂತು ನಂತರ ಬರುತ್ತಾರೆ. ನೀವಂತು ಅದೃಷ್ಟವಂತರಾಗಿದ್ದೀರಿ ಏಕೆಂದರೆ ಇಷ್ಟಾದರೂ ಮಿಲನ ಮಾಡುವ ಅವಕಾಶ ಸಿಕ್ಕಿದೆ ಟೆಂಟ್‌ನಲ್ಲಿ ಇರಬೇಕಾಯಿತೆಂದರೆ ಏನಾಯಿತು. ಗಾದಿಯ ಮೇಲೆಯೇ ಮಲಗುತ್ತಿದ್ದೀರಲ್ಲವೇ. ಬ್ರಹ್ಮಾಭೋಜನವಂತು ಚೆನ್ನಾಗಿ ಸಿಗುತ್ತಿದೆಯಲ್ಲವೇ? ಮಣ್ಣಿನದಂತೂ ಸಿಗುತ್ತಿಲ್ಲಾ ತಾನೆ? ಪ್ರೀತಿಯಿಂದ ತಿನ್ನುತ್ತೀರಲ್ಲವೇ? ಸ್ವಲ್ಪವಂತು ಇರುತ್ತದೆಯಲ್ಲವೇ. ಇದ್ದೇ ಇರುತ್ತದೆ ಏಕೆ ಮಾಯೆ ಮತ್ತು ಪ್ರಭುವಿನ ಆಟ ಜೊತೆ-ಜೊತೆಯಲ್ಲಿಯೇ ನಡೆಯುತ್ತದೆ. ಒಂದುವೇಳೆ ಪರಮಾತ್ಮನ ಮುಖಾಂತರ ಮೇಳವಾಗುತ್ತದೆಯೆಂದರೆ ಮಾಯೆಯು ಅವ್ಯಸ್ಥೆಯನ್ನು ಅವಶ್ಯವಾಗಿ ಮಾಡುತ್ತದೆ. ನಿಮ್ಮ ಕೆಲಸವಾಗಿದೆ ಮೇಳ ಮಾಡುವುದು. ಅದರ ಕೆಲಸವಾಗಿದೆ ಅವ್ಯವಸ್ಥೆ ಮಾಡುತ್ತದೆ. ಅಂದಾಗ ಅವ್ಯವಸ್ಥೆಯು ಆಯಿತು ಮತ್ತು ಮೇಳವು ಆಯಿತು (ಯಾರೋ ಹೇಳಿದರು ಬಿರುಗಾಳಿ ಹೋಯಿತು) ಏನೂ ಪರವಾಗಿಲ್ಲ. ನಿಮ್ಮದು ಪುರುಷಾರ್ಥದ ಬಿರುಗಾಳಿಯಾಗಿದೆ ಮತ್ತು ಇದು ಗಾಳಿಯ ಬಿರುಗಾಳಿಯಾಗಿದೆ. ಗಾಬರಿಯಂತು ಆಗುವುದಿಲ್ಲವಲ್ಲವೇ ಏನಾಗುವುದೋ? ಇಲ್ಲ, ಬಿರುಗಾಳಿ ಬರಲಿ ಅಥವಾ ಮಳೆಯೇ ಬರಲಿ, ಎಷ್ಟೇ ಏರುಪೇರಾಗಿರಲಿ ಆದರೆ ನಿಮ್ಮ ಮನಸ್ಸು ಅಚಲವಾಗಿದೆಯಲ್ಲವೇ? ಟೆಂಟ್ ಹಾರುತ್ತದೆಯೇನೋ ಎಂದು ಮಾತೆಯರು ಗಾಬರಿಯಂತು ಆಗಿಲ್ಲವೇ? ಸ್ವಲ್ಪ-ಸ್ವಲ್ಪ ಗಾಬರಿಯಾಯಿತೇ, ಏನಾಗುವುದು, ಆರೋಗ್ಯ ಚೆನ್ನಾಗಿರುವುದೇ, ಇಲ್ಲವೇ? ಏನೇ ಆಗಲಿ ಭಕ್ತಿಗಿಂತ ಪೆಟ್ಟು ಮತ್ತು ಪರಿಶ್ರಮ ಕಡಿಮೆಯಿದೆಯಲ್ಲವೇ, ಭಕ್ತಿಯ ಹಾಗೆ ಪೆಟ್ಟನ್ನು ತಿನ್ನುತ್ತಿಲ್ಲವಲ್ಲವೇ, ಮೋಜಿನಲ್ಲಿರುತ್ತಿರಲ್ಲವೇ. ಅಂದಾಗ ಈ ಮೇಳ ಇಷ್ಟವಾಯಿತೇ ಅಥವಾ ಅವ್ಯವಸ್ಥವನ್ನು ನೋಡಿ ಗಾಬರಿಯಾಯಿತೇ? ಇಲ್ಲ ಯಾರು ಗಾಬರಿಯಾಗಲಿಲ್ಲವೇ? ಒಬ್ಬಿಬ್ಬರಂತು ಗಾಬರಿಯಾಗಿರಬಹುದು? ಮಜಾ ಬರುತ್ತಿದೆಯಲ್ಲವೇ? ಇನ್ನೂ ಎರಡು ದಿನ ಇಡುವುದೇ? ಒಳ್ಳೆಯದು, ಬಾಪ್‌ದಾದಾರವರು ಸಹ ಮಾಯೆಯ ಈ ಅವ್ಯಸ್ಥೆಯನ್ನು ನೋಡಿ ಸುತ್ತಾಡುತ್ತಿರುತ್ತಾರೆ. ಮಕ್ಕಳು ಏನು ಮಾಡುತ್ತಿದ್ದಾರೆ ಮತ್ತು ಮಾಯೆಯು ಏನು ಮಾಡುತ್ತಿದೆ? ಎಂದು ನೋಡುತ್ತಾರೆ.

ಬಾಪ್‌ದಾದಾರವರಿಗೆ ಮಕ್ಕಳ ಸ್ನೇಹ ನೋಡಿ ಖುಷಿಯಾಗುತ್ತದೆ ಸ್ನೇಹವು ಮೇಳವನ್ನು ರಚಿಸಿತು, ಬಾಪ್‌ದಾದಾರವರಿಗೂ ಸ್ನೇಹವಿದೆ, ಮಕ್ಕಳಿಗೂ ಸ್ನೇಹವಿದೆ. ಎರಡು ಸೇರಿದರೆ ಆಗುವುದು ಮೇಳ, ದೃಷ್ಯವು ತುಂಬಾ

ಚೆನ್ನಾಗಿದೆ. ಇಷ್ಟು ದೊಡ್ಡ ಪರಿವಾರವು ಸಿಗುವುದು ಯಾರಿಗಾದರೂ ಸಿಗುವುದೇ? ನಿಮ್ಮ ಮನೆಗಳು ಎಷ್ಟಿವೆ? (ಅನೇಕ ಇದೆ) ಅವುಗಳನ್ನು ಬಾಬಾರವರ ಮನೆ ಎಂದು ಹೇಳುತ್ತಿರಲ್ಲವೇ ಅಂದಾಗ ಬಾಪ್‌ದಾದಾರವರ ಮನೆಯೇ ತಮ್ಮ ಮನೆ. ಪ್ರಪಂಚದವರಂತೂ ಇವರು ಮನೆ ಬಾಗಿಲುಗಳನ್ನು ಬಿಟ್ಟುಬಿಡುತ್ತಾರೆ ಎಂದು ಹೇಳುತ್ತಾರೆ ಆದರೆ ನೀವು ಎಷ್ಟು ಮನೆಗಳನ್ನು ಕಟ್ಟಿಕೊಂಡಿದ್ದೀರಿ. ಲೆಕ್ಕವಿಡಲು ಆಗುವುದಿಲ್ಲ ನೆನಪು ಮಾಡಿಕೊಳ್ಳಬೇಕಾಗಿ ಬರುತ್ತದೆ. ಆದ್ದರಿಂದ ಇದು ಬಿಡುವುದಲ್ಲ ತಯಾರು ಮಾಡಿಕೊಳ್ಳುವುದು. ಈಗ ಹೇಳಿ ಕುಟುಂಬವನ್ನು ಬಿಟ್ಟುಬಿಟ್ಟಿದ್ದೀರಾ ಅಥವಾ ಮಿಲನ ಮಾಡಲು ಆಗದಷ್ಟು ಪರಿವಾರವನ್ನು ತಯಾರು ಮಾಡಿಕೊಂಡಿದ್ದೀರಾ. ಬ್ರಾಹ್ಮಣರೆಲ್ಲರೂ ಎಷ್ಟು ಜನರಿದ್ದರೂ, ಎಲ್ಲಿದ್ದರೂ ಒಂದೇ ಸ್ಥಾನದಲ್ಲಿ ಸಿಗಬಹುದೇ? ಕಷ್ಟವಾಗುವುದಲ್ಲದೇ, ಏಕೆಂದರೆ ಬೇರೆಯವರ ರಾಜ್ಯವಲ್ಲವೇ. ತಮ್ಮ ರಾಜ್ಯವಲ್ಲ ಅಲ್ಲವೇ, ಆದರೂ ತಂದೆ ಸಿಕ್ಕರು. ಬೇಹದ್ದಿನ ಪರಿವಾರವು ಸಿಕ್ಕಿತು ಬೇಹದ್ದನ್ನು ನೆನಪು ಮಾಡುವುದರಿಂದ ಬೇಹದ್ದಿನ ಖುಷಿ, ಬೇಹದ್ದಿನ ನಶೆಯಿರುತ್ತದೆ ಒಂದುವೇಳೆ ಹದ್ದಿನಲ್ಲಿದ್ದು ನಾನಂತು ಇಂತಹ ದೇಶದಲ್ಲಿದ್ದೇನೆ, ಇಂತಹ ದೇಶದವನು, ಇಂತಹ ಜೋನಿನವನಾಗಿದ್ದೇನೆ, ಎಂದರೆ ಹದ್ದಾಯಿತು. ಆದರೆ ಇದಂತು ನಿಮಿತ್ತ ಮಾತ್ರ, ಗುರುತಿಗಾಗಿ, ಹೇಳಲಾಗುತ್ತದೆ, ಆದರೆ ನಿಮ್ಮನ್ನು ನೀವು ಬೇಹದ್ದಿನವರು ಎಂದು ತಿಳಿಯುತ್ತಿರಲ್ಲವೇ? ನಿಯಮಗಳನ್ನೂ ಇಡಬೇಕಾಗುತ್ತದೆ. ಕೆಲವರು ಈ ರೀತಿಯೂ ಹೇಳುತ್ತಿದ್ದಾರೆ ಏನು ಬ್ಯಾಡ್ಜ್ ಇಟ್ಟುಕೊಂಡರೆ ಮಾತ್ರ ಭೋಜನವು ಲಭಿಸುತ್ತದೆಯೇ? ನಿಮ್ಮನ್ನು ಭೋಜನದ ಸಲುವಾಗಿ ಏನೆಲ್ಲವೂ ಮಾಡಲು ಹೇಳಲಾಗುತ್ತಿದೆಯೋ ಅವೆಲ್ಲವೂ ಮಾಡಲೇಬೇಕು. ಏಕೆಂದರೆ ನಿಯಮದಲ್ಲಿಯೇ ಲಾಭವಿರುತ್ತದೆ. ಇದು ಬಂಧನವಲ್ಲ ಆದರೆ ವಿಘ್ನಗಳಿಂದ ನಿರ್ಬಂಧನರನ್ನಾಗಿ ಮಾಡುವ ಸಾಧನವಾಗಿದೆ ಇದೇನು ಹೊಸದನ್ನು ಮೊದಲು ಮಾಡಿದ್ದಾರೆ ಎಂದು ಯೋಚಿಸಬೇಡಿ. ಸಂಕಲ್ಪವಂತು ತಂದೆಯ ಹತ್ತಿರ ತಲುಪುತ್ತದೆಯಲ್ಲವೇ ಆದರೆ ಮರ್ಯಾದಾ ಪುರುಷೋತ್ತಮರು ನೀವಾಗಿದ್ದೀರಲ್ಲವೇ ಅಥವಾ ಕೇವಲ ದೊಡ್ಡ ದಾದಿಯರು ಮರ್ಯಾದಾ ಪುರುಷೋತ್ತಮರಾಗಿದ್ದಾರೆಯೇ. ನೀವು ಸಾಧಾರಣವಾಗಿದ್ದೀರಾ? ಮರ್ಯಾದಾ ಪುರುಷೋತ್ತಮ ಅರ್ಥಾತ್ ಮರ್ಯಾದೆಯ ಒಳಗಡೆ ಇರುವಂತಹವರು, ನಡೆಯುವವರು, ಹಾಂ ಜೀ ಪಾಠ ಪಕ್ಕಾ ಇದೆಯಲ್ಲವೇ? ಒಳ್ಳೆಯದು! ಮತ್ತು ಯಾವುದೇ ಮಾತು ಬಂದಾಗ ಹಾಂ ಜೀ ಎಂದು ಹೇಳುತ್ತೀರಾ ಅಥವಾ ಇಲ್ಲವೆಂದು ಹೇಳುವಿರಾ? ಯಾವಾಗ ಇಂತಹ ಮಾತನ್ನು ಹೇಳುತ್ತಾರೆಂದಾಗ ಹಾಂ ಜೀಯ ಬದಲಾಗಿ ಇಲ್ಲ ಎನ್ನುವರಲ್ಲಿ ಇಷ್ಟು ಪಕ್ಕಾ ಆಗಿ ಬಿಡುವರು ಎಂದರೆ ತಂದೆ ಹೇಳಿದರೂ ಸಹ ಕೇಳುವುದಿಲ್ಲ. ಹೇಗೆ ಸ್ಥಾಪನೆಯಲ್ಲಿ ಯಾವಾಗ ಚಿಕ್ಕ-ಚಿಕ್ಕ ಮಕ್ಕಳು ಬಂದರೆ ಬಾಪ್‌ದಾದಾರವರು ಅವರಿಗೆ ಪಾಠವನ್ನು ಪಕ್ಕಾ ಮಾಡಿಸಲು ಯಾವಾಗಲು ಹೇಳುತ್ತಿದ್ದರು ಇಲ್ಲವೆಂದು(ನಾ) ಹೇಳಿದರೆ ನಾಸ್ತಿಕರು, ಹಾಂ ಎಂದು ಹೇಳಿದರೆ ಆಸ್ತಿಕರು. ಅಂದಾಗ ನೀವೆಲ್ಲರೂ ಯಾರಾಗಿದ್ದೀರಿ? ಆಸ್ತಿಕರಾಗಿದ್ದೀರಿ. ನಾಸ್ತಿಕರಲ್ಲ ಅಲ್ಲವೇ! ಕೆಲ-ಕೆಲವೊಮ್ಮೆ ಆಗಿಬಿಡುತ್ತೀರಿ ಆಟವಾಡುತ್ತೀರಿ ಮಾಯೆಯ ಜ್ಞಾನಪೂರ್ಣರು ಸಹ ಆಗಿದ್ದೀರಿ! ಏಕೆಂದರೆ ಮಾಯೆಯು ಜ್ಞಾನಪೂರ್ಣವಾಗಿದೆ. ಬಿಳಿಸುವುದರಲ್ಲಿ ಮಾಯೆ ಜ್ಞಾನಪೂರ್ಣ ಮತ್ತು ಹಾರುವುದರಲ್ಲಿ ನೀವು ಜ್ಞಾನಪೂರ್ಣರಾಗಿದ್ದೀರಿ. ಮಾಯೆಯು ನೋಡುತ್ತದೆ ಇವರ ಹಾರುವಿಕೆಯಲ್ಲಿ ಸ್ವಲ್ಪ ಮೇಲೆ-ಕೆಳಗಾಗಿದ್ದರೆಂದು. ನೋಡಿ ಅಕ್ರಮಣ ಮಾಡುತ್ತದೆ ಮತ್ತು ನೀವು ಜ್ಞಾನಪೂರ್ಣರಾಗುವ ಕಾರಣ ತಿಳಿದುಕೊಳ್ಳುತ್ತೀರಿ. ಸೋಲುವುದಿಲ್ಲ ಆದರೆ ವಿಜಯ ಮಾಲೆ ಕೊರಳಲ್ಲಿ ಬಿಳುತ್ತದೆ. ಎಲ್ಲರ ಕೊರಳಲ್ಲಿ ವಿಜಯ ಮಾಲೆಯಿದೆಯೇ ಅಥವಾ ಕೆಲವೊಮ್ಮೆ ತೆಗೆದು ಬಿಡುತ್ತೀರಾ? ಒಳ್ಳೆಯದು.

ಹಿಂದೆಯಿರುವವರು ಮೋಜಿನಲ್ಲಿದ್ದೀರಾ ಇದು ಸಹ ಮಧುಬನದೇ ಸ್ಥಾನವಾಯಿತಲ್ಲವೇ. ಮಧುಬನವನ್ನು ಬಿಟ್ಟರೆ ಬೇರೆ ಎಲ್ಲಾದರೂ ಇಷ್ಟು ದೊಡ್ಡ ಮೇಳವಾಗುವುದಕ್ಕೆ ಸಾಧ್ಯವೇ? ಸಾಧ್ಯವಿಲ್ಲ, ಮಧುಬನ ಅರ್ಥಾತ್ ಬೇಹದ್ದಿನ ಮನೆ ಇಲ್ಲಿ ಎಲ್ಲವೂ ಬೇಹದ್ದಿನದಾಗಿದೆ ಬೇರೆ-ಬೇರೆ ಜಾಗವನ್ನು ಸಹ ನೋಡಬೇಕಾಗುತ್ತದೆ ಮತ್ತು ಇಲ್ಲಿ ಸಂಕಲ್ಪ ಮಾಡಿದ್ದೀರಿ ಮತ್ತು ಪೂರ್ಣ ಆಯಿತು. ಎಲ್ಲರೂ ತಮ್ಮ ಭಾಗ್ಯದ ಮೂಲಕ ಪರಮಾತ್ಮನ ಮೇಳದಲ್ಲಿ ತಲುಪಿಬಿಟ್ಟಿದ್ದೀರಿ. ಯಾರು ಮೊದಲನೇ ಬಾರಿ ಈ ಕಲ್ಪದಲ್ಲಿ ಬಂದಿದ್ದೀರೋ ಅವರು ಕೈ ಎತ್ತಿರಿ. (ಅಂದಾಜು 12-14 ಸಾವಿರ ಸಹೋದರ-ಸಹೋದರಿಯರ ಸಭೆಯಾಗಿದೆ. ಅದರಲ್ಲಿ ಬಹಳಷ್ಟು ಹೊಸ ಸಹೋದರ-ಸಹೋದರಿಯರಿದ್ದರು) ಒಳ್ಳೆಯದು. ಟಿ.ವಿ ಯಲ್ಲಿ ನೋಡುತ್ತಿದ್ದೀರಿ. ಬಹುತೇಕ ವಿಜ್ಞಾನದ ಸಾಧನೆಗಳು ಈಗೀಗ ಬಂದಿರುವುದನ್ನು ಸಹ ನೋಡಿ ಕೆಲ ವರ್ಷಗಳ ಮೊದಲು ಈ ವಿಜ್ಞಾನದ ಸಾಧನೆಗಳು ಇರಲಿಲ್ಲ ಆದರೆ ಯಾವುದಕ್ಕೆ ಬಂದಿವೆ? ನಿಮಗಾಗಿ, ಬಾಪ್‌ದಾದಾರವರು ವಿಜ್ಞಾನಿ ಅತ್ಮರಿಗೆ ಶುಭಾಷಯಗಳನ್ನು ತಿಳಿಸುತ್ತಾರೆ. ಏಕೆಂದರೆ ತಂದೆಯ ಮಕ್ಕಳು ಅವರಿಂದ ಸುಖವನ್ನು ತೆಗೆದುಕೊಳ್ಳುತ್ತಿದ್ದಾರಲ್ಲವೇ. ಎಷ್ಟು ಚೆನ್ನಾಗನಿಸುತ್ತಿದೆ ಆದರೆ ಬಾಪ್‌ದಾದಾ ಏನು ಬಯಸುತ್ತಾರೆ? ಸ್ಥಾಪನೆಯಾಗಿ ಎಷ್ಟು ವರ್ಷಗಳಾಯಿತು? ಡೈಮಂಡ್ ಜುಬಲಿ ಆಚರಿಸುವ ತಯಾರಿ ಮಾಡುತ್ತಿದ್ದೀರಲ್ಲವೇ. ಬಾಪ್‌ದಾದಾರವರು ಈಗ ಎಲ್ಲಾ ಮಕ್ಕಳನ್ನು ರಾಜಾ ಮಕ್ಕಳೆಂದರಲ್ಲವೇ. ಎಲ್ಲರೂ ರಾಜಾರಾಗಿದ್ದಾರೆ. ರಾಜ್ಯ ಸಿಂಹಾಸನಾಧಿಕಾರಿ ಆಗಿದ್ದಾರಲ್ಲವೇ? ರಾಜ್ಯದ ಲಕ್ಷಣ ಕಿರೀಟ, ಸಿಂಹಾಸನ ಮತ್ತು ತಿಲಕವಾಗಿದೆ. ಬಾಪ್‌ದಾದಾ ಈ ವರ್ಷದಲ್ಲಿ ಹೊಸಬರಿದ್ದರೂ ಅಥವಾ ಹಳಬರಿದ್ದರೂ, ಸಮಾಪ್ತಿಯ ಸಮಯವಂತೂ ಹೊಸಬರಿಗೂ ಸಮೀಪವಿದೆ ಮತ್ತು ಹಳಬರಿಗೂ ಸಮೀಪವಿದೆ. ನಮಗೂ ಸಹ 60 ವರ್ಷ ಆದ ನಂತರ ಸಮಾಪ್ತಿ ಆಗುತ್ತದೆ ಎಂದು ಯೋಚಿಸಬೇಡಿ. ನೀವು ಮೇಕಪ್ ಬೇಗನೆ ಮಾಡಿಕೊಳ್ಳಬೇಕು ಒಂದುವೇಳೆ ಕೊನೆಗೆ ಬಂದಿದ್ದರೆ ತೀವ್ರವಾಗಿ ಹೋಗಬೇಕು. ಆದರೆ ಸಂಪನ್ನರಾಗುವ, ಸಮಾಪ್ತಿಯ ಸಮಯ ಎಲ್ಲರದು ಒಂದೇ ಇದೆ ಇದಕ್ಕಾಗಿ ಭಲೇ ಹೊಸಬರಾಗಲಿ ಅಥವಾ ಹಳಬರಾಗಲಿ ಆದರೆ ನಾನು ಸ್ವರಾಜ್ಯ ಅಧಿಕಾರಿ ಆತ್ಮನಾಗಿದ್ದೇನೆ - ಸದಾ ಸ್ಮೃತಿಯ ತಿಲಕವಿದೆಯೇ ಅಥವಾ ಕೆಲವೊಮ್ಮೆ ಅಳಿಸಿ ಹೋಗುವಹಾಗೆ, ಕೆಲವೊಮ್ಮೆ ಇರುವ ಹಾಗೆ ಇರಬಾರದು. ಸ್ವರಾಜ್ಯ ಅಧಿಕಾರಿ ಅರ್ಥಾತ್ ತಿಲಕಧಾರಿ, ಈ ಸ್ಮೃತಿಯ ತಿಲಕ ಅವಿನಾಶಿಯಾಗಿ ಇರಬೇಕು. ಸಾಧಾರಣವಾಗಿ ಅಲ್ಲ ನಾನು ತಿಲಕಧಾರಿಯಾಗಿದ್ದೇನೆ. ನಾನು ವಿಶ್ವಕಲ್ಯಾಣದ ಜವಾಬ್ದಾರಿಯ ಕಿರೀಟಧಾರಿಯಾಗಿದ್ದೇನೆ ಎಂಬ ಸ್ಮೃತಿಯಲ್ಲಿ ಇರಬೇಕು. ಎಷ್ಟು ದೊಡ್ಡ ವಿಶ್ವವಾಗಿದೆ ಮತ್ತು ನೀವೆಲ್ಲರು ವಿಶ್ವ ಕಲ್ಯಾಣಕಾರಿಯಾಗಿದ್ದೀರಿ. ತಂದೆಯೊಬ್ಬರೇ ಅಲ್ಲ. ತಂದೆಯ ಜೊತೆ ನೀವೆಲ್ಲರೂ ಇದ್ದೀರಿ. ವಿಶ್ವ ಕಲ್ಯಾಣದ ಜವಾಬ್ದಾರಿಯ ಕಿರೀಟಧಾರಿ ಮತ್ತು ಸದಾ ತಂದೆಯ ಹೃದಯಸಿಂಹಾಸನಾಧಿಕಾರಿ ಆಗಿರಬೇಕು. ಕೆಳಗಡೆ ಬರಬಾರದು. ಸದಾ ಸಿಂಹಾಸನಾಧಿಕಾರಿಯಾಗಿ ಇರಬೇಕು. ಬಹಳ ಪ್ರಿಯ, ಮುದ್ದು ಮಕ್ಕಳಿದ್ದರೆ ತಂದೆ-ತಾಯಿಯು ಅವರನ್ನು ಮಣ್ಣಿನಲ್ಲಿ ಹೋಗಲು ಬಿಡುವುದಿಲ್ಲ. ನೆಲದ ಮೇಲೆ ಕಾಲಿಡಲು ಬಿಡುವುದಿಲ್ಲ. ಅಂದಾಗ ನೇವೆಷ್ಟು ಮುದ್ದು ಮಕ್ಕಳಾಗಿದ್ದೀರಿ! ಮುದ್ದು ಮಕ್ಕಳಾಗಿದ್ದೀರಾ ಅಥವಾ ಬರುವವರಿದ್ದಾರೋ? ನೀವೇ ಆಗಿದ್ದೀರಿ. ಸಿಂಹಾಸನವನ್ನು ಬಿಟ್ಟು ಸಾಧಾರಣ ಸ್ವರೂಪ, ಸಾಧಾರಣ ಸಂಕಲ್ಪ ಈ ಮಣ್ಣಿನಲ್ಲಿ ಅಥವಾ ಧರಣಿಯಲ್ಲಿ ಕಾಲಿಡಬೇಡಿ ಬುದ್ಧಿ ರೂಪಿ ಕಾಲು ಸದಾ ಸಿಂಹಾಸನದ ಮೇಲಿರಲಿ. ಪರಮಾತ್ಮ ತಂದೆಯ ಮಕ್ಕಳಾಗಿದ್ದಾರೆ. ಮಹಾತ್ಮ, ಧರ್ಮಾತ್ಮರವಲ್ಲ. ಪರಮಾತ್ಮರವರಾಗಿದ್ದೀರಿ. ಈಗಂತು ಎಲ್ಲರು ನಶೆಯಲ್ಲಿ ಚೆನ್ನಾಗಿದ್ದೀರಿ. ಆದಂತು ಕಾಣುತ್ತಿದೆ ಆದರೆ ಸದಾ

ಇರಬೇಕಲ್ಲವೇ? ಸ್ವಲ್ಪ-ಸ್ವಲ್ಪ ಇರುವುದು ನಂತರ ಯುದ್ಧ ಮಾಡುವುದು, ನಂತರ ವಿಜಯ ಪ್ರಾಪ್ತಿ ಮಾಡುವುದು ಈ ರೀತಿಯಿಲ್ಲವೇ? ಬ್ರಾಹ್ಮಣರಾಗಿದ್ದೀರಾ ಅಥವಾ ಕ್ಷತ್ರಿಯರಾಗಿದ್ದೀರಾ? ಬ್ರಾಹ್ಮಣರಾಗಿದ್ದೀರಿ, ಕ್ಷತ್ರಿಯರಲ್ಲ. ಯುದ್ಧವನ್ನು ಮಾಡುವುದಿಲ್ಲವೇ? ಕೆಲವೊಮ್ಮೆ ಬ್ರಾಹ್ಮಣರಾಗುತ್ತೀರಿ. ಕೆಲವೊಮ್ಮೆ ಕ್ಷತ್ರಿಯರಾಗುತ್ತೀರಿ? ಒಂದುವೇಳೆ ಮಾಯೆಯ ಜೊತೆ ಯುದ್ಧ ಮಾಡಬೇಕಾಗುತ್ತದೆ ಎಂದರೆ ಕ್ಷತ್ರಿಯರಾದಿರಿ. ಬ್ರಾಹ್ಮಣರೆಂದರೆ ವಿಜಯಿ ಮತ್ತು ಕ್ಷತ್ರಿಯರೆಂದರೆ ಯುದ್ಧ ಮಾಡುವವರು. ಬಾಪ್‌ದಾದಾರವರಿಗೆ ಕೆಲವೊಮ್ಮೆ ಮಕ್ಕಳ ಮೇಲೆ ಬಹಳ ದಯೆ ಬರುತ್ತದೆ. ಯೋಗದಲ್ಲಿ ಕುಳಿತುಕೊಳ್ಳುತ್ತಾರೆ ಮತ್ತು ಯುದ್ಧವನ್ನು ಮಾಡುತ್ತಾರೆ ಒಂದು ಗಂಟೆ ಯೋಗವನ್ನು ಜೋಡಿಸಿದೆನು ಎಂದು ಹೇಳುತ್ತಾರೆ ಆದರೆ ಒಂದು ಗಂಟೆಯಲ್ಲಿ ಯುದ್ದ ಎಷ್ಟು ಸಮಯ ನಡೆಯಿತು ಮತ್ತು ಯೋಗ ಎಷ್ಟು ಸಮಯವಿತ್ತು? ಒಂದುವೇಳೆ ಯಾವುದೇ ಕಾರಣದಿಂದ ಅನುಭೂತಿಯಾಗಲಿಲ್ಲವೆಂದರೆ ಅವಶ್ಯ ಯುದ್ಧದ ಸ್ಥಿತಿಯಾಗಿದೆ ಬಾಪ್‌ದಾದಾರವರು ಯೋಗಿ ಮಕ್ಕಳು ಎಂದು ಹೇಳುತ್ತಾರೆ ಮತ್ತು ನೀವು ಯುದ್ಧದ ಮಕ್ಕಳಾಗಿಬಿಡುತ್ತಿದ್ದೀರಿ, ಎಲ್ಲಿಯವರೆಗೆ ಯುದ್ಧ ಮಾಡುವಿರಿ? ಅಂತಿಮದವರೆಗೂ ಯುದ್ದ ಮಾಡುವಿರಾ? ಭಲೇ ಯುದ್ಧ ಮಾಡಿ ಎಂದು ಅನುಮತಿ ಕೊಟ್ಟು ಬಿಡುವುದೇ! ಅನುಮತಿ ಬೇಕೇ ಬೇಕಾಗಿಲ್ಲವೇ? ಮತ್ತೆ ಏಕೆ ಮಾಡುತ್ತೀರಿ? ಬಲಹೀನರಾಗಿಬಿಟ್ಟರೆ ಮಾಯೆ ಎಷ್ಟು ಅಧೀನರಾಗಿ ಮಾಡಿ ಬಿಡುತ್ತದೆಯೆಂದರೆ ಬಯಸುವುದಿಲ್ಲ ಆದರೆ ಮಾಡಿಬಿಡುತ್ತೀರಿ, ಹೇಗೆ ಕೆಲ-ಕೆಲ ಸೇವಕರು ಬಹಳ ಮುಗ್ಧರಾಗಿದ್ದರೆ ಮಾಲೀಕರು ಅವರನ್ನು ಅಧೀನರನ್ನಾಗಿ ಮಾಡಿಕೊಳ್ಳುತ್ತಾರೆ. ಆ ಸೇವಾಧಾರಿ ಮಾಡಬಾರದ ಕೆಲಸವನ್ನು ಕೂಡ ಆ ಮಾಲೀಕರು ಮಾಡಿಸಿಕೊಳ್ಳುತ್ತಾರೆ. ಆ ಕೆಲಸವನ್ನು ಮಾಡದಿದ್ದರೆ ಉದ್ಯೋಗ ಏಕೆ ಮಾಡುತ್ತಿದ್ದೀರಿ ಎನ್ನುತ್ತಾರೆ. ಮಾಯೆ ಕೂಡ ಹಾಗೆಯೇ ಮಾಡುತ್ತದೆ. ನೀವು ಬಯಸದಿದ್ದರೂ ಬಲಹೀನವಾಗಿರುವ ಕಾರಣದಿಂದ ಮಾಯೆಗೆ ಅಧೀನವಾಗಿ ಬಿಡುತ್ತಿದ್ದೀರಿ. ಆ ಸಮಯದಲ್ಲಿ ಯೋಗಿಗಳೇ ಅಥವಾ ಯುದ್ಧ ಮಾಡುವವರೇ? ಬಾಪ್‌ದಾದಾರವರಿಗೆ ಮಕ್ಕಳ ಯುದ್ಧ ಚೆನ್ನಾಗಿ ಅನಿಸುತ್ತಿಲ್ಲ, ಪರಮಾತ್ಮನ ಮಕ್ಕಳು ಸದಾ ಮೋಜಿನಲ್ಲಿ ಇರುವವರು, ಆನಂದದಲ್ಲಿ ಇರುವವರು, ಅಷ್ಟೇ ಆಗಲಿ ಯುದ್ಧದ ಶ್ರಮ ಮಾಡುವವರಲ್ಲ. ಆದ್ದರಿಂದ ಹೇಗೆ ತಯಾರಾಗುತ್ತೀರಿ? ಯೋಗಿ ಮಕ್ಕಳಾಗಿ ತಯಾರಾಗುತ್ತೀರಾ ಅಥವಾ ಯುದ್ಧ ಮಾಡುವವರಾಗುತ್ತೀರಾ? ಯೋಗಿ ಆಗುತ್ತೀರಾ ಅಥವಾ ಸ್ವಲ್ಪ ಸ್ವಲ್ಪ ಯುದ್ಧ ಮಾಡುವುದು ಚೆನ್ನಾಗಿ ಅನಿಸುತ್ತದೆಯೇ? ಎಲ್ಲರೂ ಹಾಗೆಯೇ ಎಂದಂತೂ ಹೇಳುತ್ತಿದ್ದೀರಿ ಆದರೆ ಮಾಡುವ ಸಮಯದಲ್ಲಿ ಫೋಟೋ ತೆಗೆಯುತ್ತೇನೆ. ಸದಾ ಸ್ವರಾಜ್ಯಾಧಿಕಾರಿ ಚಾರ್ಟ್ ಈ ವರ್ಷ ಇರಬೇಕು. ಅದೀನತೆ ಸಮಾಪ್ತಿಯಾಗಬೇಕು. 63 ಜನ್ಮಗಳಿಂದ ಅಧೀನವಾಗಿದ್ದಿರಿ. ಈಗ ಈ ಒಂದು ಜನ್ಮ ಅಧಿಕಾರಿಯಾಗಲು ಲಭಿಸಿದೆ. ಇದರಲ್ಲಿ ಕೂಡ ಅಧೀನರಾಗಿ ಇರುತ್ತೀರಾ? ಅಧೀನರಾಗಲು ಒಂದು ಜನ್ಮ ಎಕ್ಸ್ಟ್ರಾ ಬೇಕಾಗಿದೆಯೇ? ಮಜಾ ಪಡೆಯಬಹುದು, ಬೇಡವೇ? ಅಧಿಕಾರವಂತೂ ಲಭಿಸಿದೆ, ಕೇವಲ ಅಧಿಕಾರವನ್ನು ಸಂಭಾಳಿಸಿಕೊಳ್ಳಿರಿ. ಸೋಮಾರಿಯಾಗಬೇಡಿರಿ, ಬಲಹೀನವಾಗಬೇಡಿರಿ. ಹೇಳುವುದಂತು ನಾನು ಮಾಸ್ಟರ್ ಸರ್ವಶಕ್ತಿವಂತನು ಎಂದು ಹೇಳುತ್ತಿದ್ದೀರಿ. ಯಾರಾದರೂ ನಾನು ಮಾಸ್ಟರ್ ಬಲಹೀನನು ಎಂದು ಹೇಳುತ್ತಿದ್ದೀರಾ? ಆದರೆ ಹೇಗೆ ತಯಾರಾಗುತ್ತಿದ್ದೀರಿ ಮಾಸ್ಟರ್ ಸರ್ವಶಕ್ತಿವಂತರಾಗಿ ತಯಾರಾಗುತ್ತಿದ್ದೀರಾ ಅಥವಾ ಬಲಹೀನವಾಗುತ್ತಿದ್ದೀರಾ? ಇದು ಚೆನ್ನಾಗಿರುತ್ತದೆಯೇ? ಕೇಳಲು ಕೂಡ ಚೆನ್ನಾಗಿರುವುದಿಲ್ಲ.

*ಎಲ್ಲಾಕಡೆಯ ದೇಶ-ವಿದೇಶದ ಸೂಕ್ಷ್ಮ ಸ್ವರೂಪದಿಂದ ದೃಶ್ಯವನ್ನು ನೋಡುವಂತಹ ಆತ್ಮರು, ನಾಲ್ಕು ಕಡೆಯ ಸದಾ ಶ್ರೇಷ್ಠ ಪಾಲನೆಯಲ್ಲಿ ಬೆಳೆಯುತ್ತಿರುವಂತಹ, ಶ್ರೇಷ್ಠ ವಿದ್ಯೆಯಿಂದ ರಾಜ್ಯ ಪದವಿಯನ್ನು ಪಡೆಯುವಂತಹ ಆತ್ಮರು, ಸದ್ಗುರುವಿನ ಮೂಲಕ ಸರ್ವವರದಾನ ಪ್ರಾಪ್ತಿ ಮಾಡಿಕೊಳ್ಳುವಂತಹ ಆತ್ಮರು, ಮಾಯಾಜೀತ್ ವಿಜಯಿ ರತ್ನ, ಸದಾ ಯುದ್ಧವನ್ನು ಬಿಟ್ಟು ರಾಜಯೋಗಿ ಸ್ಥಿತಿಯಲ್ಲಿ ಸ್ಥಿತರಾಗಿರುವಂತಹ ಸರ್ವ ಶ್ರೇಷ್ಠ ಆತ್ಮರಿಗೆ ಬಾಪ್‌ದಾದಾರವರ ನೆನಪು-ಪ್ರೀತಿ ಮತ್ತು ನಮಸ್ತೆ.*

ರಿವೈಸ್ ಕೋರ್ಸ್ 31-03-1995.

*ಪರಮಾತ್ಮ ಮಿಲನದ ಮೇಳದ ಉಡುಗೊರೆ ಕಿರೀಟ, ಸಿಂಹಾಸನ ಮತ್ತು ತಿಲಕ.*

ಹೊಸಬರಾದರೂ, ಹಳಬರಾದರೂ ಸಮಾಪ್ತಿ ಸಮಯ ಎಲ್ಲರಿಗೂ ಒಂದೇ ಆಗಿದೆ. ಇದಕ್ಕಾಗಿ ನಾನು ಸ್ವರಾಜ್ಯ ಅಧಿಕಾರಿ ಆತ್ಮ ನಾಗಿದ್ದೇನೆ ಎಂಬ ಸ್ಮೃತಿಯ ತಿಲಕವನ್ನು ಸದಾ ಇಟ್ಟುಕೊಳ್ಳಬೇಕು. ಈ ಸ್ಮೃತಿಯ ತಿಲಕ ಅವಿನಾಶಿ ಆಗಿರಲಿ. ಸಾಧಾರಣವಲ್ಲ. ನಾನು ತಿಲಕಧಾರಿಯಾಗಿದ್ದೇನೆ, ನಾನು ವಿಶ್ವಕಲ್ಯಾಣದ ಜವಾಬ್ದಾರಿಯ ಕಿರೀಟಧಾರಿಯಾಗಿದ್ದೇನೆ. ತಂದೆಯೊಬ್ಬರೇ ವಿಶ್ವಕಲ್ಯಾಣವನ್ನು ಮಾಡುತ್ತಿಲ್ಲ ನೀವೆಲ್ಲರೂ ಕೂಡ ವಿಶ್ವಕಲ್ಯಾಣಕಾರಿ ಆಗಿದ್ದೀರಿ. ಈ ಜವಾಬ್ದಾರಿಯ ಕಿರೀಟಧಾರಿಯಾಗಿ ಇರಬೇಕು ಮತ್ತು ಸದಾ ತಂದೆಯ ಹೃದಯ ಸಿಂಹಾಸನಾಧಿಕಾರಿಯಾಗಿ ಇರಬೇಕು. ಕೆಳಗೆ ಬರಬಾರದು. ಸದಾ ಸಿಂಹಾಸನಾಧಿಕಾರಿಯಾಗಿ ಎಂದು ತಿಳಿಸುತ್ತಾ ಶಿವಪರಮಾತ್ಮ ಹೇಳಿರುವ ಮಹಾವಾಕ್ಯಗಳಿಂದ ಆತ್ಮಿಕ ಸ್ಥಿತಿಯಲ್ಲಿದ್ದು ಮನನ ಚಿಂತನೆ ಮಾಡಬೇಕಾಗಿರುವ ಸಂಕಲ್ಪಗಳು.

ಆತ್ಮಿಕ ಸ್ಥಿತಿ/ಯೋಗ ಸ್ಥಿತಿ.

ನಾನು ಆತ್ಮ ಪವಿತ್ರ ಸ್ವರೂಪ, ಶಿವ ಪರಮಾತ್ಮ ನನ್ನ ತಂದೆ.

1. ನಾನು ಭಾಗ್ಯ ವಿಧಾತನಿಂದ ದಿವ್ಯ ಬ್ರಾಹ್ಮಣ ಜನ್ಮ ಲಭಿಸುವುದು ಎಂಬ ಮೊದಲ ನಂಬರಿನ ಭಾಗ್ಯದ ಅಧಿಕಾರಿ.

2. ನಾನು ಪರಮಾತ್ಮನೊಂದಿಗೆ ತಂದೆ, ಶಿಕ್ಷಕ, ಸದ್ಗುರು ಮತ್ತು ಸರ್ವ ಸಂಬಂಧಗಳನ್ನು ಕೂಡ ಅನುಭವ ಮಾಡಿಕೊಂಡಿದ್ದೇನೆ.

3. ನಾನು ಪರಮಾತ್ಮನಿಂದ ಲಭಿಸುವ ಶ್ರೇಷ್ಠ ಭಾಗ್ಯದಿಂದ ಸದಾ ನಶೆ ಮತ್ತು ಖುಷಿಯ ಹೊಳಪಿನಲ್ಲಿ ಇದ್ದೇನೆ.

4. ನಾನು ಪರಮಾತ್ಮನ ಶಿಕ್ಷಣದಿಂದ ತ್ರಿನೇತ್ರಿ, ತ್ರಿಕಾಲದರ್ಶಿ, ತ್ರಿಲೋಕಿನಾಥನಾಗುವ ಡಿಗ್ರಿಯನ್ನು ಪಡೆದಿದ್ದೇನೆ.

5. ನಾನು ಸದ್ಗುರುವಿನಿಂದ "ಮನ್ಮನಾಭವ" ಎಂಬ ಮಂತ್ರವನ್ನು ಪಡೆದು ನಂಬರ್‌ವನ್ ಆಗಿದ್ದೇನೆ.

6. ನಾನು ಮರ್ಯಾದೆಗಳಲ್ಲಿ ಇರುತ್ತಾ? ಮರ್ಯಾದೆಗಳಲ್ಲಿ ನಡೆಯುವ ಮರ್ಯಾದಾ ಪುರುಷೋತ್ತಮನು.

7. ನಾನು ಸ್ವರಾಜ್ಯಾಧಿಕಾರಿ ಆತ್ಮನು ಎಂಬ ಸ್ಮೃತಿಯ ತಿಲಕವನ್ನು ಸದಾ ಇಟ್ಟುಕೊಂಡಿದ್ದೇನೆ.

8. ನಾನು ಸದಾ ವಿಶ್ವಕಲ್ಯಾಣದ ಜವಾಬ್ದಾರಿಯ ಕಿರೀಟಧಾರಿ ಮತ್ತು ತಂದೆಯ ಹೃದಯ ಸಿಂಹಾಸನಾಧಿಕಾರಿ.

9. ನಾನು ಸದಾ ಯೋಗ ಮಾಡುವ ಬ್ರಾಹ್ಮಣನು. (ಕ್ಷತ್ರಿಯರಾದರೆ ಮಾಯೆಯೊಂದಿಗೆ ಯುದ್ಧ ಮಾಡುತ್ತಾರೆ).

10. ನಾನು ಸದಾ ಮೋಜಿನಲ್ಲಿ, ಆನಂದದಲ್ಲಿ ಇರುವ ಪರಮಾತ್ಮನ ಮಗುವಾಗಿದ್ದೇನೆ.